ಅನಧಿಕೃತವಾಗಿ ನೀರನ್ನು ಮಾರಾಟ ಮಾಡುವುದು

564 (1027) ಶ್ರೀ ಮುನಿರತ್ನ (ರಾಜರಾಜೇಶ್ವರಿನಗರ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು ನಗರದಲ್ಲಿ ಬೋರ್‌ವೆಲ್‌ಗಳಿಂದ ನೀರನ್ನು ಅನಧಿಕೃತವಾಗಿ ಟ್ಯಾಂಕರ್‌ಗಳ ಮೂಲಕ ಪ್ರತಿಷ್ಠಿತ ಸ್ಟಾರ್ ಹೋಟೆಲ್‌ಗಳಿಗೆ ಹೆಚ್ಚು ಹಣ ಪಡೆದು ಸರಬರಾಜು ಮಾಡುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ನೀರು ಸರ್ಕಾರದ ಆಸ್ತಿಯಾಗಿದ್ದು, ಅದನ್ನು ಅನಧಿಕೃತವಾಗಿ ಮಾರಾಟ ಮಾಡುವುದು ತಪ್ಪಲ್ಲವೇ ;

ಇ) ಹಾಗಿದ್ದಲ್ಲಿ, ಈ ರೀತಿ ಅನಧಿಕೃತವಾಗಿ ನೀರನ್ನು ಮಾರಾಟ ಮಾಡುತ್ತಿರುವವರ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ? (ವಿವರಗಳನ್ನು ಒದಗಿಸುವುದು)

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–

ಅ) ಬೆಂಗಳೂರು ನಗರದಲ್ಲಿ ಬೋರ್‌ವೆಲ್‌ಗಳಿಂದ ನೀರನ್ನು ಟ್ಯಾಂಕರ್‌ಗಳ ಮೂಲಕ ಪ್ರತಿಷ್ಠಿತ ಸ್ಟಾರ್ ಹೋಟೆಲ್‌ಗಳಿಗೆ ಸರಬರಾಜು ಮಾಡುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ನೀರನ್ನು ಖಾಸಗಿ ವಾಟರ್ ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಟ್ರೇಡ್ ಲೈಸನ್ಸ್ ಪಡೆಯಬೇಕಾಗಿರುತ್ತದೆ. ಟ್ರೇಡ್ ಲೈಸನ್ಸ್ ಪಡೆಯದೆ ನೀರು ಮಾರಾಟ ಮಾಡುವುದು ಕಾನೂನು ಬಾಹಿರವಾದುದು.

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪತ್ರದ ಸಂಖ್ಯೆ : ಆ.ಅ(ಪ)/ಇಸಿ/ಪಿಆರ್ 31/2012–13 ದಿನಾಂಕ : 29–05–2012 ರಂದು ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಅದರಂತೆ ನೀರು ಸರಬರಾಜು ಮಾಡುವ ಖಾಸಗಿ ವಾಟರ್ ಟ್ಯಾಂಕರ್‌ಗಳಿಗೆ ಉದ್ದಿಮೆ ಪರವಾನಿಗೆಯನ್ನು ನೀಡುವ ಬಗ್ಗೆ ನಿಬಂಧನೆಗಳನ್ನು ವಿಧಿಸಿರುತ್ತದೆ. (ಪ್ರತಿಯನ್ನು ಅನುಬಂಧ–1 ಲಗತ್ತಿಸಲಾಗಿದೆ)

ಅನುಬಂಧ-1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಆ.ಅ(ಪ)/ಇಸಿ/ಪಿಆರ್/31/2012-13 ಆರೋಗ್ಯಾಧಿಕಾರಿ(ಪಶ್ಚಿಮ)ರವರ ಕಛೇರಿ
ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ,
ಬೆಂಗಳೂರು. ದಿನಾಂಕ : 29-05-2012

ಸುತ್ತೋಲೆ

ವಿಷಯ : **ನೀರು ಸರಬರಾಜು ಮಾಡುವ ಖಾಸಗಿ ವಾಟರ್‌ಟ್ಯಾಂಕರ್‌ಗಳಿಗೆ ಉದ್ದಿಮೆ ಪರವಾನಿಗಿಯನ್ನು ನೀಡುವ ಬಗ್ಗೆ.**

ಉಲ್ಲೇಖ : **ಮಾನ್ಯ ಆಯುಕ್ತರು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ರವರ ಪತ್ರದ ಸಂಖ್ಯೆ : ಬಿ.ಹೆಚ್.19/ 2012-13, ದಿನಾಂಕ : 16-05-2012**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಸಗಿ ವಾಟರ್ ಟ್ಯಾಂಕ್ ಲಾರಿಗಳಿಂದ ನೀರು ಸರಬರಾಜು ಮಾಡುತ್ತಿದ್ದು, ಇದಕ್ಕೆ ಪಾಲಿಕೆಯಿಂದ ಪರವಾನಗಿಯನ್ನು ಪಡೆದು ನಡೆಸುತ್ತಿರುವ ಮತ್ತು ಅನಧಿಕೃತವಾಗಿ ನಡೆಸುತ್ತಿರುವ ವಾಟರ್‌ಟ್ಯಾಂಕರ್‌ಗಳಿಗೆ ಪರವಾನಗಿಯನ್ನು ನೀಡುವ ಸಂದರ್ಭದಲ್ಲಿ ಕೆಲವೊಂದು ನೀತಿ ನಿಯಮಗಳನ್ನು ಮತ್ತು ಕೆಲವೊಂದು ದಾಖಲಾತಿಗಳನ್ನು ಪಡೆದು ಪರವಾನಗಿಯನ್ನು ನೀಡಬೇಕೆಂದು ಮೇಲಿನ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ, ಮಾನ್ಯ ಆಯುಕ್ತರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ರವರು ಸೂಚಿಸಿರುತ್ತಾರೆ.

ಅದರಂತೆ, ಈಗಾಗಲೇ ಪ್ರಾದೇಶಿಕ ಸಾರಿಗೆ ಸಂಸ್ಥೆ (R.T.O.)ಯಲ್ಲಿ ಪಶ್ಚಿಮ ವಲಯದಿಂದ ನೋಂದಣಿಯಾಗಿರುವ 27 ವಾಟರ್ ಟ್ಯಾಂಕರ್‌ಗಳನ್ನು ಗುರುತಿಸಿ, ಈ ಕೆಳಕಂಡ ನಿಯಮಗಳನ್ನು ಪಾಲಿಸಲು ತಿಳುವಳಿಕೆ ಪತ್ರವನ್ನು ಜಾರಿ ಮಾಡಿ ಮತ್ತು ಇನ್ನೂ ಮುಂದೆ ವಾಟರ್ ಟ್ಯಾಂಕರ್‌ಗಳಿಗೆ ಪರವಾನಗಿಯನ್ನು ನೀಡುವ ಸಂದರ್ಭದಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಪಡೆದು ಮತ್ತು ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಪರವಾನಗಿಯನ್ನು ನೀಡಲು ಸೂಚಿಸಿದೆ.

1. The Private water tanker lorry/tractor shall have valid R.T.O. Registration, Permit.
2. The Source of water should be mentioned in the trade licence.
3. The rate of each water tanker lorry/tractor load should be displayed on the tanker.
4. Every load supplied should have receipt with number and date.
5. The Quality of water from the source of supply from the tankers should be tested and certified as per I.S.I. standards by the laboratory empanelled by BBMP.
6. The Private water tanker lorry supply agency should have details of monthly statistics of the number of water tankers supplied, rate at which supplied, quality of water of source and tanker etc., and furnish the details to the authority on a regular basis.

ಈ ಮೇಲೆ ತಿಳಿಸಿರುವ ನಿಯಮಗಳನ್ನು ಪರವಾನಗಿಯನ್ನು ನೀಡುವ ಸಮಯದಲ್ಲಿ ಪಾಲಿಸುವುದು ಮತ್ತು ಈ ಕಛೇರಿಗೆ ವರದಿ ಸಲ್ಲಿಸಲು ಆದೇಶಿಸಿದೆ.

ಸಹಿ/-
ಆರೋಗ್ಯಾಧಿಕಾರಿ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಜಲ್ಲಿ ಕ್ರಷರ್‌ಗಳು

514 (546) **ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ ಕ್ಷೇತ್ರ)** :- ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಜಲ್ಲಿ ಕ್ರಷರ್‌ಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕ್ರಷರ್‌ಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳೇನು ;

ಆ) ಈ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಲ್ಲಿ ಕ್ರಷರ್‌ಗಳೆಷ್ಟು ; ಅನುಮತಿ ಪಡೆದು ನಡೆಯುತ್ತಿರುವ ಹಾಗೂ ಅನಧಿಕೃತವಾಗಿ ನಡೆಯುತ್ತಿರುವ ಕ್ರಷರ್‌ಗಳೆಷ್ಟು ; ಈ ಕ್ರಷರ್‌ಗಳು ಯಾವ್ಯಾವ ಇಲಾಖೆಗಳಿಂದ ಅನುಮತಿ ಪಡೆದಿರುತ್ತವೆ; (ವಿವರ ನೀಡುವುದು)

ಇ) ಅನಧಿಕೃತವಾಗಿ ನಡೆಯುತ್ತಿರುವ ಕ್ರಷರ್‌ಗಳ ಮೇಲೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?